ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಮ್ ಮೋಹನ್ ರೆಡ್ಡಿ

ತೀರ್ಪು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಮನೋಹರ್

ವೇನುಗ್ರಾಮ್ ವಿವಿಧೋದ್ದೇಶ ಪತ್ತಿನ ಸಹಕಾರ ಸಂಘ ನಿ., -ವಿರುದ್ಧ ಆದಾಯ ತೆರಿಗೆ ಅಧಿಕಾರಿ, ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಳಗಾಮ್

ಐಟಿಎಸಂಖ್ಯೆ: 100042/2014, ದಿನಾಂಕ 17 ನೇ ಸೆಪ್ಟೆಂಬರ್, 2014.

ತೀರ್ಪ

ನ್ಯಾಯಮೂರ್ತಿ ಶ್ರೀ ರಾಮ್ ಮೋಹನ್ ರೆಡ್ಡಿ

ತೆರಿಗೆದಾರರು, ಈ ಅಧಿನಿಯಮದ 80 ಪಿ (2) (ಎ) (i) ನೇ ಪ್ರಕರಣದ ಅಡಿಯಲ್ಲಿ ಕಳೆತದ ಪ್ರಯೋಜನವನ್ನು ವಿಸ್ತರಿಸಲು ನಿರಾಕರಿಸಿ, ಕರನಿರ್ಧರಣಾ ಆದೇಶ ದಿನಾಂಕ 31.10.2012 ಅನುಬಂಧ ' ಬಿ ', ಮೊದಲನೇ ಅಪೀಲು ಪ್ರಾಧಿಕಾರದ ಆದೇಶ ದಿನಾಂಕ 07.10.2013 ರ ಅನುಬಂಧ ' ಸಿ ' ಮತ್ತು ಆದಾಯ ತೆರಿಗೆ ಅಪೀಲು ನ್ಯಾಯಾಧಿಕರಣ, ಪಣಜಿ ವಿಭಾಗ, ಪಣಜಿ (ಸಂಕ್ಷಿಪ್ತವಾಗಿ ' ನ್ಯಾಯಾಧಿಕರಣ ') ಆದೇಶ ದಿನಾಂಕ 17.04.2014 ರ ಅನುಬಂಧ ' ಎ ' ಯನ್ನು ಪ್ರಶ್ನಿಸಿ, ಆದಾಯ ತೆರಿಗೆ ಅಧಿನಿಯಮ, 1961 ರ (ಸಂಕ್ಷಿಪ್ತವಾಗಿ ಈ ' ಅಧಿನಿಯಮ ') 260 ಎ ಪ್ರಕರಣವನ್ನು ಕೋರಿ ಅಪೀಲು ಸಲ್ಲಿಸಿದ್ದಾರೆ.

2. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ರ (ಸಂಕ್ಷಿಪ್ತವಾಗಿ ' ಕೆಸಿಎಸ್ ಅಧಿನಿಯಮ ') ರ ಅಡಿಯಲ್ಲಿ ಅಪೀಲುದಾರ ಸಹಕಾರ ಪತ್ತಿನ ಸಂಘದ ನೋಂದಣಿಯಲ್ಲಿ ಆ ವಿಷಯವು ಸಂಕ್ಷಿಪ್ತವಾಗಿ ಬರುತ್ತದೆ ಮತ್ತು ತೀರ್ಮಾನ ಕೈಗೊಳ್ಳುವುದಕ್ಕಾಗಿ ಮುಖ್ಯ ಪ್ರಶ್ನೆಯು ಮುಂದಿನಂತಿದೆ:

"ಕೆಸಿಎಸ್ ಅಧಿನಿಯಮ'ದ 2 (ಹೆಚ್ -2) ಪ್ರಕರಣದ ಅಡಿಯಲ್ಲಿ " ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ " ದ ಪರಿಭಾಷೆಯೊಳಗೆ ಬರುವ ಅಪೀಲುದಾರ-ವಿವಿಧೋದ್ದೇಶ ಸಹಕಾರ ಪತ್ತಿನ ಸಂಘವು, ಈ ಅಧಿನಿಯಮದ 80 ಪಿ ( 4) ನೇ ಪ್ರಕರಣಕ್ಕೆ ಸಂಬಂಧಿಸಿದ ಈ ಅಧಿನಿಯಮದ 80 ಪಿ ( 2) ( ಎ) ( i) ನೇ ಪ್ರಕರಣದ ಅಡಿಯಲ್ಲಿ ತನ್ನ ಆದಾಯದ ಸ ೦ ಬ ೦ ಧದಲ್ಲಿನ ಕಳತದ ಪ್ರಯೋಜನಕ್ಕೆ ಹಕ್ಕುಳ್ಳದ್ದಾಗಿದೆಯೇ ??

3. ಅಪೀಲುದಾರ-ವಿವಿಧೋದ್ದೇಶ ಸಹಕಾರ ಪತ್ತಿನ ಸಂಘವನ್ನು, ನೋಂದಣಿ ಪ್ರಮಾಣಪತ್ರ ದಿನಾಂಕ 23.10.2001 ರಲ್ಲಿ ' ಕೆಸಿಎಸ್ ಅಧಿನಿಯಮ'ದ ಅಡಿಯಲ್ಲಿ ನೋಂದಾಯಿಸಲಾಗಿದ್ದು, ಕರ ನಿರ್ಧರಣಾ ವರ್ಷ 2010-11ಕ್ಕಾಗಿ ಅದರ ವಿವರಪತ್ರವನ್ನು ದಾಖಲು ಮಾಡಿದ್ದು, 11,24,117/-ರೂಪಾಯಿಗಳ ಒಟ್ಟು ಜುಮ್ಮಾ ಆದಾಯವನ್ನು ಘೋಷಿಸಲಾಗಿದೆ ಮತ್ತು 80 ಪಿ ( 2) ( ಎ) ( i) ನೇ ಪ್ರಕರಣದ ಅಡಿಯಲ್ಲಿ ಕಳೆತದಂತೆ ಇಡೀ ಮೊತ್ತವನ್ನು ಕ್ಲೇಮು ಮಾಡಲಾಗಿದೆ ಮತ್ತು ತೆರಿಗೆ ವಿಧಿಸಬಹುದಾದ ಆದಾಯವು ಸೊನ್ನೆಯಾಗಿದೆ.

4. ಕರ ನಿರ್ಧರಣಾ ಪ್ರಾಧಿಕಾರವು, (ಕರ ನಿರ್ಧರಣಾಧಿಕಾರಿ, ವಾರ್ಡ್ 1 ( 2), ಬೆಳಗಾಮ್), ಕರ ನಿರ್ಧರಣಾ ಆದೇಶ ದಿನಾಂಕ 31.10.2012 ರ ಮೂಲಕ, ಅನುಬಂಧ (ಬಿ) ಯ ಕಳೆತವನ್ನು ನಿರಾಕರಿಸಿದೆ ಮತ್ತು

ಅಪೀಲುದಾರ ಬ್ಯಾಂಕು ಈ ' ಅಧಿನಿಯಮ'ದ 80 ಪಿ ( 4) ನೇ ಪ್ರಕರಣದ ಹಿನ್ನೆಲೆಯಲ್ಲಿ, 80 ಪಿ ( 2) ( ಎ) ( i) ನೇ ಪ್ರಕರಣದ ಅಡಿಯಲ್ಲಿ ಕಳೆತದ ಪ್ರಯೋಜನಕ್ಕೆ ಅನರ್ಹವಾದ ಪ್ರಾಥಮಿಕ ಸಹಕಾರ ಬ್ಯಾಂಕಾಗಿದೆಯೆಂಬ ಆಧಾರವಾಕ್ಯದ ಮೇಲೆ, 12,11,580/ರೂಪಾಯಿಗಳಿಗೆ ಆದಾಯವನ್ನು ನಿರ್ಧರಿಸಿದೆ.ಆದಾಯ ತೆರಿಗೆ (ಅಪೀಲುಗಳ) ಆಯುಕ್ತರು, ಬೆಳಗಾಮ್ ಇವರ ಮುಂದೆ ಮೊದಲನೇ ಅಪೀಲಿನಲ್ಲಿರುವಂತೆ ಈ ಆದೇಶವನ್ನು ಒಪ್ಪಿಕೊಂಡಿರುವಾಗ, ಆದೇಶ ದಿನಾಂಕ 07.10.2013 ಅನುಬಂಧ (ಸಿ) ಯ ಅಪೀಲನ್ನು ವಜಾಗೊಳಿಸುವ ಮೂಲಕ ಸ್ಥಿರೀಕರಿಸಲಾಗಿದೆ.ಅಪೀಲುದಾರನು ನ್ಯಾಯಾಧಿಕರಣದ ಮುಂದೆ ಅಪೀಲನ್ನು ಹೂಡಿದ್ದು, ಆದೇಶ ದಿನಾಂಕ 17.04.2014, ಅನುಬಂಧ ' ಎ ' ಮೂಲಕ, ಈ ಅಪೀಲನ್ನು ವಜಾಗೊಳಿಸಲಾಗಿದೆ.

5. ಈ ಅಧಿನಿಯಮದ 80 ಪಿ ಪ್ರಕರಣದ ( 4) ನೇ ಉಪ ಪ್ರಕರಣವು, ಕೆಳಗಿನಂತಿದೆ:

80 ಪಿ ಸಹಕಾರ ಸಂಘಗಳ ಆದಾಯದ ಸಂಬಂಧದಲ್ಲಿ ಕಳೆತ:

( 1) XXXXX

( 2) XXXXX

( 3) XXXXX

[( 4) ಈ ಪ್ರಕರಣದ ಉಪಬಂಧಗಳು, ಪ್ರಾಥಮಿಕ ಕೃಷಿ ಪತ್ತಿನ ಸಂಘ ಅಥವಾ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕನ್ನು ಹೊರತುಪಡಿಸಿ ಯಾವುದೇ ಸಹಕಾರ ಬ್ಯಾಂಕಿನ ಸಂಬಂಧದಲ್ಲಿ ಅನ್ವಯಿಸತಕ್ಕದ್ದಲ್ಲ.ವಿವರಣೆ:- ಈ ಉಪಪ್ರಕರಣದ ಉದ್ದೇಶಗಳಿಗಾಗಿ.

(ಎ) ಸಹಕಾರ C ಬ್ಯಾಂಕ್ " ಮತ್ತು " ಪ್ರಾಥಮಿಕ ಕೃಷಿ ಪತ್ತಿನ ಸಂಘ ಎಂದರೆ, ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 (1949/10) ರ ಭಾಗ- V ರಲ್ಲಿ ಅನುಕ್ರಮವಾಗಿ ಗೊತ್ತುಪಡಿಸಲಾದ ಅರ್ಥವನ್ನು ಹೊಂದಿರತಕ್ಕದ್ದು;

2 ಸೇರ್ಪಡೆ ಹಣಕಾಸು ಅಧಿನಿಯಮ, 2006 (2006/21) ಪ್ರಕರಣ 19 (DD_0_DD ರಿಂದ ಪರಿಣಾಮಕಾರಿಯಾಗುವಂತೆ).ಈ ಮುಂಚೆಯೇ ( 4) ನೇ ಉಪ-ಪ್ರಕರಣವನ್ನು, ಹಣಕಾಸು ಅಧಿನಿಯಮ, 1969, (1969/14) ಪ್ರಕ ರಣ 10 (ಬಿ) (DD_0_DD ರಿ ೦ ದ ಪರಿಣಾಮಕಾರಿಯಾಗುವಂತೆ) ರಿಂದ ಬಿಟ್ಟು ಬಿಡಲಾಗಿದೆ. )

(ಬಿ) ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ " ಎಂದರೆ, ತಾಲ್ಲೂಕಿಗೆ ಸೀಮಿತವಾಗಿರುವ ತನ್ನ ಕಾರ್ಯಕ್ಷೇತ್ರವನ್ನು ಹೊಂದಿರುವ ಸಂಘ ಎಂದರ್ಥ ಮತ್ತು ಅದರ ಮುಖ್ಯ ಉದ್ದೇಶವು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಚಟುವಟಿಕೆಗಳಿಗಾಗಿ ದೀರ್ಘಾವಧಿ ಸಾಲವನ್ನು ನೀಡುವುದಾಗಿದೆ. ]

6. ಈ ಶಾಸನಬದ್ಧ ಉಪಬಂಧವು, ಈ ಅಧಿನಿಯಮದ 80 ಪಿ ಪ್ರಕರಣದ ಅಡಿಯಲ್ಲಿ ಕಳೆತದ ಪ್ರಯೋಜನಗಳಿಗೆ ' ಪ್ರಾಥಮಿಕ ಕೃಷಿ ಪತ್ತಿನ ಸಂಘ ' ಅಥವಾ " ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ'ನ್ನು ಹೊರತುಪಡಿಸಿದ ಯಾವುದೇ ಸಹಕಾರ ಬ್ಯಾಂಕನ್ನು ಅನರ್ಹಗೊಳಿಸುತ್ತದೆ.ಆದ್ದರಿಂದ, ಅಪೀಲುದಾರ ವಿವಿಧೋದ್ದೇಶ ಸಹಕಾರ ಪತ್ತಿನ ಸಂಘವು ' ಪ್ರಾಥಮಿಕ ಕೃಷಿ ಪತ್ತಿನ ' ಅಥವಾ ' ಪ್ರಾಥಮಿಕ

ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್'ನ ಪರಿಭಾಷೆಯೊಳಗೆ ಬರುತ್ತದೆಯೇ?ಎಂಬುದನ್ನು ಗಮನಿಸುವ ಅಗತ್ಯವಿದೆ.ಸಹಕಾರ ಬ್ಯಾಂಕು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಂಘವು, ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 (1949/10) ರ ಭಾಗ- V ರಲ್ಲಿ ಅವುಗಳಿಗೆ ಕ್ರಮವಾಗಿ ಗೊತ್ತುಪಡಿಸಲಾದ ಅರ್ಥಗಳನ್ನು ಹೊಂದಿರತಕ್ಕದ್ದೆಂದು ಸದರಿ ಉಪಪ್ರಕರಣದ ವಿವರಣೆಯು ಹೇಳುತ್ತದೆ.ಈ ಪ್ರಕರಣದ ಸಂಗತಿಗಳಲ್ಲಿ, ವಿವರಣೆ ( ಎ) ನ್ನು ಗಮನಿಸಿದರೆ ಅದು ಸಾಕಾಗುತ್ತದೆ.

7. ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 ರ ಭಾಗ- V, ಸಹಕಾರ ಬ್ಯಾಂಕ್ಗಳಿಗೆ ಈ ಅಧಿನಿಯಮ ಅನ್ವಯಿಸುವಂತೆ ಉಪಬಂಧಿಸುತ್ತದೆ.5 ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

1 [ಭಾಗ- V

ಸಹಕಾರ ಬ್ಯಾಂಕ್ಗಳಿಗೆ ಈ ಅಧಿನಿಯಮ ಅನ್ವಯಿಸುವಿಕೆ

56. ಮಾರ್ಪಾಡುಗಳಿಗೊಳಪಟ್ಟು ಸಹಕಾರ ಸಂಘಗಳಿಗೆ ಅನ್ವಯಿಸುವ ಅಧಿನಿಯಮ.- ಈ ಅಧಿನಿಯಮದ ಉಪಬಂಧಗಳು, ಸದ್ಯಕ್ಕೆ ಜಾರಿಯಲ್ಲಿರುವಂತೆ ಅನ್ವಯಿಸತಕ್ಕ ಅಥವಾ ಅವು ಸಹಕಾರ ಸಂಘಗಳ, ಸಂಬಂಧದಲ್ಲಿ ಅನ್ವಯಿಸುವಂತೆ ಅಥವಾ ಈ ಮುಂದಿನ ಮಾರ್ಪಾಡುಗಳಿಗೊಳಪಟ್ಟು, ಬ್ಯಾಂಕಿಂಗ್ ಕಂಪನಿಗಳ ಸಂಬಂಧದಲ್ಲಿ ಎ 0 ದರೆ:

( ಎ) ಈ ಅಧಿನಿಯಮ, ಅನ್ಯಥಾ ಅಗತ್ಯಪಡಿಸಿದ ಸಂದರ್ಭದ ಹೊರತಾಗಿ,

(i) " ಬ್ಯಾಂಕಿಂಗ್ ಕಂಪನಿ " ಅಥವಾ " ಕಂಪನಿ " ಅಥವಾ 66 " ಅಂಥ ಕಂಪನಿಯು " ಎಂಬ ಉಲ್ಲೇಖಗಳನ್ನು ಸಹಕಾರಿ ಬ್ಯಾಂಕ್ನ ಉಲ್ಲೇಖದಂತೆ ಅರ್ಥೈಸತಕ್ಕದ್ದು;

(ii) 66 " ಈ ಅಧಿನಿಯಮದ ಪ್ರಾರಂಭ'ವೆಂಬ ಉಲ್ಲೇಖಗಳನ್ನು ಬ್ಯಾಂಕಿಂಗ್ ಕಾನೂನುಗಳು (ಸಹಕಾರ ಸಂಘಗಳಿಗೆ ಅನ್ವಯಿಸುವಿಕೆ) ಅಧಿನಿಯಮ, 1965 (1965/23) ರ ಪ್ರಾರಂಭದ ಉಲ್ಲೇಖಗಳನ್ನಾಗಿ ಅರ್ಥೈಸತಕ್ಕದ್ದು;

(ಬಿ) ಪ್ರಕರಣ 2 ರಲ್ಲಿ, " ಕಂಪನಿಗಳ ಅಧಿನಿಯಮ, 1956 (1956/1) ಮತ್ತು " ಎಂಬ ಪದಗಳು ಮತ್ತು ಸಂಖ್ಯೆಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) ಪ್ರಕರಣ 5 ರಲ್ಲಿ,

2 [ ( i) (ಸಿಸಿ) ಖಂಡದ ತರುವಾಯ, ಈ ಮುಂದಿನ ಖಂಡಗಳನ್ನು ಸೇರಿಸತಕ್ಕದ್ದು, ಎಂದರೆ,

(ಸಿಸಿ) XXXXX

(ಸಿಸಿ ii) XXXXX

3 (ಸಿಸಿ ii ಎ) 66 ಸಹಕಾರ ಸಂಘ " ಎ ೦ ದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ, ವಿವಿಧೋದ್ದೇಶ ಸಹಕಾರ ಸಂಘಗಳು, ಅಥವಾ ಇತರೆ ಯಾವುದೇ ಕೇಂದ್ರ ಅಥವಾ ರಾಜ್ಯ

ಕಾನೂನಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕೇಂದ್ರ ಅಧಿನಿಯಮದ ಮೇರೆಗೆ ನೋ ೦ ದಾಯಿತವಾಗಿರುವ ಅಥವಾ ನೋಂದಾಯಿತವಾಗಿದೆಯೆ 0 ದು ಭಾವಿಸಲ್ಪಡುವ ಸಂಘ; ]

(ಸಿಸಿiii) XXX

4 (ಸಿಸಿ iiiಎ) XXX; ]

5 (ಸಿಸಿ iii(ಬಿ) XXX; ]

(ಸಿಸಿ) " ಪ್ರಾಥಮಿಕ ಕೃಷಿ ಪತ್ತಿನ ಸಂಘ " ಎಂದರೆ, ಸಹಕಾರ ಸ ೦ ಘ,

(1) ಕೃಷಿ ಉದ್ದೇಶಗಳಿಗಾಗಿ ಅಥ ವಾ ಪಿ ಚಟುವಟಿಕೆಗಳೊಂದಿಗಿನ ಸಂಬಂಧಿತ ಉದ್ದೇಶಗಳಿಗಾಗಿ ಅದರ ಸದಸ್ಯರಿಗೆ ಹಣಕಾಸು ಸೌಕರ್ಯ ನೀಡುವುದು, ಅದರ ಮೂಲಉದ್ದೇಶವಾಗಿದ್ದು, ಅಥವಾ ಪ್ರಧಾನ ವ್ಯವಹಾರವಾಗಿದ್ದು; (ಬೆಳೆ ಮಾರುಕಟ್ಟೆ ಸೇರಿದಂತೆ) ಮತ್ತು

(2) ಅದರ ಉಪವಿಧಿಗಳು, ಸದಸ್ಯನಾಗಿ ಇತರೆ ಯಾವುದೇ ಸಹಕಾರ ಸಂಘದ ಪ್ರವೇಶವನ್ನು ಅನುಮತಿಸುವುದಿಲ್ಲ:

ಪರಂತು, ಈ ಉಪಖಂಡವು ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದಿಂದ ನೀಡಲಾದ ನಿಧಿಗಳ ಪೈಕಿ ಅಂಥ ಸಹಕಾರ ಸಂಘದ ಷೇರು ಬಂಡವಾಳವನ್ನು ಒಪ್ಪಿಕೊಳ್ಳಲು ಅಂಥ ಸಹಕಾರ ಬ್ಯಾಂಕ್ ಕಾರಣದಿಂದ ಸದಸ್ಯನಾಗಿ ಸಹಕಾರ ಬ್ಯಾಂಕ್ನ ಅಂಗೀಕಾರಕ್ಕೆ ಅನ್ವಯವಾಗತಕ್ಕದ್ದಲ್ಲ;

XXX "

1 [ಭಾಗ 5 ( 5 ನೇ ಪ್ರಕರಣವನ್ನು ಒಳಗೊಂಡು) ಅಧಿನಿಯಮ, 1965/23 ರ ಮೂಲಕ ಸೇರ್ಪಡೆ ಮಾಡಿದ್ದು, 14 ನೇ ಪ್ರಕರಣ, (DD_0_DD ರಿಂದ ಜಾರಿಯಲ್ಲಿದೆ. )ಈ ಮುಂಚೆಯೇ 56 ನೇ ಪ್ರಕರಣವನ್ನು 1957 ಅಧಿನಿಯಮ ಸಂಖ್ಯೆ 36 ಮೂಲಕ ನಿರಸನಗೊಳಿಸಿದ್ದು, ಪ್ರಕರಣ 2 ಮತ್ತು ಅನುಸೂಚಿ.1 (DD_1_DD ಜಾರಿಯಲ್ಲಿದೆ)

2 [1981 ರ ಅಧಿನಿಯಮ ಸ ೦ ಖ್ಯೆ 61 ರ ಮೂಲ ಕ ಪ್ರತಿಯೋಜಿಸಲಾಗಿದೆ ಮತ್ತು ಎರಡನೇ ಷೆಡ್ಯೂಲ್, ಭಾಗ, 11 ( 1 ನೇ ಮೇ, 1982 ರಿಂದ ಜಾರಿಯಲ್ಲಿದೆ) 3 [2004 ರ ಅಧಿನಿಯಮ ಸಂ .24, ಪ್ರಕರಣ 2 ( 1) ( ಎ) ಮೂಲಕ ಸೇರಿಸಲಾಗಿದ್ದು, (DD_0_DD ರಿಂದ ಜಾರಿಯಲ್ಲಿದೆ)

4 XXX

5 XXX

8. ಕೆಸಿಎಸ್ ಅಧಿನಿಯಮದ 2 (ಎಫ್ -1) ನೇ ಪ್ರಕರಣವು, ವಿವಿಧೋದ್ದೇಶ ಸಹಕಾರ ಸಂಘವನ್ನು ಹೀಗೆ ಪರಿಭಾಷಿಸುತ್ತದೆ:

*2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

XXX

1 [ (ಎಫ್ .1) ' ವಿವಿದ್ದೋದ್ದೇಶ ಸಹಕಾರ ಸಂಘ ', ಎಂದರೆ, ಅದು ಒಂದು ಪ್ರಾಥಮಿಕ ಸಂಘವಾಗಿದ್ದು ಅದರ ಸದಸ್ಯರಿಗೆ ಸಾಲ, ವ್ಯಾಪಾರ, ಕೈಗಾರಿಕೆ, ಗೃಹೋಪಯೋಗಿ ವಸ್ತು ಸಂಬಂಧಿತ ಸೇವೆಗಳು ಸೇರಿದಂತೆ ವಿವಿಧ ಸೇವೆಗಳನ್ನು ನೀಡುವುದು ಅದರ ಉದ್ದೇಶವಾಗಿದೆ;

(ಎಫ್ .2) XXX] ”

[ಎಫ್ -1] ಮತ್ತು (ಎಫ್ -2) ಖಂಡಗಳನ್ನು 2010 ರ ಅಧಿನಿಯಮ ಸಂ .6 ರ ಮೂಲಕ ಸೇರಿಸಲಾಗಿದೆ ಮತ್ತು ದಿನಾಂಕ 3.11.2009 ರಿಂದ ಜಾರಿಯಲ್ಲಿರುವಂತೆ ಭಾವಿಸತಕ್ಕದ್ದು.

ಕೆಸಿಎಸ್ ಅಧಿನಿಯಮದ ಪ್ರಕರಣ 2 (ಹೆಚ್ -2) ' ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಈ ರೀತಿ ಪರಿಭಾಷಿಸುತ್ತದೆ '

* 6 [ (ಹೆಚ್ -2) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಎಂದರೆ, ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 ರ (ಕೇಂದ್ರ ಅಧಿನಿಯಮ, 1949 (10) 5 ನೇ ಪ್ರಕರಣದ ಖಂಡ (ಸಿಸಿ IV) ರಮೇರೆಗೆ ಪರಿಭಾಷಿಸಲಾದಂಥ ಸಹಕಾರ ಸಂಘ ಮತ್ತು ವಿವಿದೋದ್ದೇಶ ಸಹಕಾರ ಸಂಘ ಸೇರಿದಂತೆ; ] ”

6 [2010 ರ ಅಧಿನಿಯಮ, ಸಂಖ್ಯೆ 6 ರ ಮೂಲಕ (ಹೆಚ್ -2) ಖಂಡವನ್ನು ಸೇರಿಸಲಾಗಿದೆ ಮತ್ತು ದಿನಾಂಕ 3.11.2009 ರಿಂದ ಜಾರಿಯಲ್ಲಿರುವಂತೆ ಭಾವಿಸತಕ್ಕದ್ದು. ]

9. ' ಸದಸ್ಯ ' ಎಂದರೆ, ಸಂಘದ ವಿಧಿಗಳು, ನಿಯಮಗಳು, ಉಪ-ವಿಧಿಗಳ ಪ್ರಕಾರ ನೋಂದಣಿಯ ಸಮಯದಲ್ಲಿ ಸದಸ್ಯತ್ವಕ್ಕಾಗಿ ಅರ್ಜಿಯನ್ನು ಸಲ್ಲಿಸಿರುವ ಮತ್ತು ಸದಸ್ಯತ್ವವನ್ನು ಪಡೆದುಕೊಂಡಿರುವ ವ್ಯಕ್ತಿ ಎಂಬುದಾಗಿ ಅಪೀಲುದಾರ ಸ ಂ ಘದ ಉಪವಿಧಿಗಳು ಪರಿಭಾಷಿಸುತ್ತವೆ.ಸದಸ್ಯತ್ವಕ್ಕಾಗಿ ನೀಡಿರುವ ಅಧ್ಯಾಯ -2 ರಲ್ಲಿನ ಉಪ-ವಿಧಿ 5 ಈ ಕೆಳಗಿನಂತಿದೆ:

“5. ಸದಸ್ಯತ್ವ:ಸರ್ಕಾರ ಮತ್ತು ಅರೆ ಸರ್ಕಾರ ಹಾಗೂ ಸಂಘಗಳಲ್ಲಿ ನೌಕರರಾದ ವ್ಯಕ್ತಿಗಳೂ ಸೇರಿದಂತೆ ಯಾರೇ ವ್ಯಕ್ತಿ, ಮತ್ತು ಸಂಘದ ಜಾರಿಯ (ಪ್ರವರ್ತನೆ) ಪ್ರದೇಶದೊಳಗೆ ಸಾಮಾನ್ಯವಾಗಿ ವಾಸಿಸುತ್ತಿರುವ ಮತ್ತು ಸಂಘದಿಂದ ನೀಡಲಾದ ಸೇವೆಗಳ ಅಗತ್ಯವಿರುವ ಮತ್ತು ಭಾರತ ಕರಾರು ಅಧಿನಿಯಮ, 1872 ರ 11 ನೇ ಪ್ರಕರಣದ ಅಡಿಯಲ್ಲಿ ಕರಾರನ್ನು ಮಾಡಿಕೊಳ್ಳಲು ಸಕ್ಷಮನಾದ ವ್ಯಕ್ತಿಯು ಸಂಘದ ಸದಸ್ಯತ್ವವನ್ನು ಹೊಂದಲು ಅರ್ಹವಾಗಿರುತ್ತಾರೆ.99

10. ಅಪೀಲುದಾರರು ಕೆಸಿಎಸ್ ಅಧಿನಿಯಮದ ಅಡಿಯಲ್ಲಿ ನೀಡಲಾದ ನೋಂದಣಿ ಪ್ರಮಾಣ ಪತ್ರದಿಂದ ಸಾಕ್ಷ್ಯದಂತೆ ಕೆಸಿಎಸ್ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲಾದ ವಿವಿಧೋದ್ದೇಶ ಸಹಕಾರ ಸಂಘವಾಗಿದೆ ಎಂಬ ಸುಸ್ಥಾಪಿತವಾದ ಸಂಗತಿಯ ಹಿನ್ನೆಲೆಯಲ್ಲಿ, ಆದರೆ, ಕೆಸಿಎಸ್ ಅಧಿನಿಯಮದ 2 (ಎಫ್ -1) ನೇ ಪ್ರಕರಣದ ಅಡಿಯಲ್ಲಿ ಮತ್ತು ' ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ' ಪರಿಭಾಷೆಯ ಮೇರೆಗೆ, ಸದರಿ ಪರಿಭಾಷೆಯೊಳಗೆ ಅದು ಬರುತ್ತದೆಯೆಂದು ಹೇಳಲಾಗದು.ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 ರ 56 ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದ l (ಸಿಸಿ IV) ಪ್ರಕರಣಕ್ಕೆ ಗಮನ ಕೊಡಬೇಕಿದ್ದು, ಅಪೀಲುದಾರನು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವಾಗಿದ್ದು ಅದರ ಉಪ ವಿಧಿಗಳ ಮೇರೆಗೆ, ಸಹಕಾರ

ಸಂಘವು, ಸದಸ್ಯನಾಗಲು ಆಗುವುದಿಲ್ಲವೆಂಬ ಸಂಗತಿಯನ್ನು ಸೇರಿಸಲಾಗಿದ್ದು, ಅದು ಈ ' ಅಧಿನಿಯಮದ ಅಗತ್ಯತೆಗಳನ್ನು ಪಾಲಿಸುತ್ತದೆ.

11. ವಿಷಯದ ಆ ದೃಷ್ಟಿಯಿಂದ, ಈ ' ಅಧಿನಿಯಮದ 80 ಪಿ ಪ್ರಕರಣದ ( 4) ನೇ ಉಪ-ಪ್ರಕರಣದಲ್ಲಿ ರೂಪಿಸಲಾದ ಮಾರ್ಪಾಡು, ಅಪೀಲುದಾರರ ವಿವಿಧೋದ್ದೇಶ ಸಹಕಾರ ಪತ್ತಿನ ಸಂಘಕ್ಕೆ ಪ್ರಾಮಾಣಿಕವಾಗಿ ಅನ್ವಯಿಸುತ್ತದೆ, ಹಾಗಾಗಿ, ಈ ಅಧಿನಿಯಮದ 80 ಪಿ ( 2) ( ಎ) ( i) ರ ಪ್ರಕರಣದ ಅಡಿಯಲ್ಲಿ ಕಳೆತಕ್ಕೆ ಹಕ್ಕುಳ್ಳವರಾಗಿರುತ್ತಾರೆ.ಪ್ರಾಧಿಕಾರಗಳು ಎಂದರೆ, ಆದಾಯ ತೆರಿಗೆ ಅಧಿಕಾರಿ, ಮೊದಲನೇ ಅಪೀಲು ಪ್ರಾಧಿಕಾರ ಮತ್ತು ನ್ಯಾಯಾಧಿಕರಣವು ಅವಕಾಶವನ್ನು ಕಳೆದುಕೊಂಡಿವೆ ಮತ್ತು ಅಪೀಲುದಾರರ ಸಂಘದ ವ್ಯವಸ್ಥಾಪನೆಯ ಅಗತ್ಯ ಸಂಗತಿಯನ್ನು ಗಮನಿಸದೆ, ಅಪೀಲುದಾರ-ತೆರಿಗೆದಾರರು ಈ ಅಧಿನಿಯಮದ 80 ಪಿ ( 2) ( ಎ) ( i) ನೇ ಪ್ರಕರಣದ ಅಡಿಯಲ್ಲಿ ಕಳೆತಕ್ಕೆ ಅನರ್ಹಗೊಳಿಸಿ ಈ ಅಧಿನಿಯಮದ 80 ಪಿ ಪ್ರಕರಣದ ಉಪ-ಪ್ರಕರಣ ( 4) ರಿಂದ ಬಾಧಿತರಾಗಿದ್ದಾರೆಂದು ನಿರ್ಣಯಿಸಿದ್ದಾರೆ.

12. ಮೇಲೆ ರೂಪಿಸಲಾದ ಪ್ರಶ್ನೆಗೆ ಅದಕ್ಕನುಸಾರವಾಗಿ ಉತ್ತರಿಸಲಾಗಿದೆ.

13. ವಿಷಯದ ಆ ದೃಷ್ಟಿಯಿಂದ, ಕಾನೂನು ಬಾಹಿರವಾಗಿರುವ ಮತ್ತು ಸಮರ್ಥಿಸಿಕೊಳ್ಳಲಾಗದ ಪ್ರಾಧಿಕಾರಗಳ ಆದೇಶಗಳನ್ನು, ರದ್ದುಗೊಳಿಸಲಾಗಿದೆ.ಈ ಅಪೀಲನ್ನು ಅದಕ್ಕನುಸಾರವಾಗಿ ಅಂಗೀಕರಿಸಲಾಗಿದೆ.